ಯಾರಿಗೂ ಇಲ್ಲ, ನಿಯಮಗಳನ್ನು ಗಾಳಿಗೆ ತೂರಿ ಸದನವನ್ನು ನಡೆಸಬೇಕೆಂಬುದು ಏನು ಇದೆ?

ಅಧ್ಯಕ್ಷರು: ಆಯಿತು, ನಿಮ್ಮ ಮಾತನ್ನು ಗೌರವಿಸುತ್ತೇನೆ. ಇವತ್ತು ಇಷ್ಟು ಸಾಕು ಇನ್ನು ಹೋಗೋಣ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಬರುವುದು, ಹೋಗುವುದು ಆಗುತ್ತದೆ, ಆದರೆ ನಮ್ಮ ಬೇಡಿಕೆಗಳು ಸದನದಲ್ಲಿ ಚರ್ಚೆ ಆಗಬೇಕೋ ಬಿಡಬೇಕೋ....

ಅಧ್ಯಕ್ಷರು: ನಿಮ್ಮ ಬೇಡಿಕೆಗೆ ನಾನು ಅಡ್ಡ ಬಂದಿಲ್ಲ, ಒಳ್ಳೆ ಕಥೆ ಆಯಿತು, ''ಊರೆಲ್ಲಾ ಜಂಗಮರೆ, ಕೋಳಿ ಹೋದ ದಾರಿಯೇ ಗೊತ್ತಿಲ್ಲ'' ಎಂದರೆ ಹೇಗೆ, ನೀವೆಲ್ಲಾ ಸೇರಿಕೊಂಡು ಸಭೆಯನ್ನು ನುಂಗಾಕಿ ಬಿಟ್ಟರೆ ನಾನೇನೂ ಬೇಡಿಕೆ ಮೇಲೆ ಚರ್ಚೆಗೆ ಅಡ್ಡಿ ಬಂದಿಲ್ಲ.

ಶ್ರೀ ಕಾಗೋಡುತಿಮ್ಮಪ್ಪ: ಒಂದೆರಡು ಬೇಡಿಕೆ ಚರ್ಚೆಯಾಗಿದೆ ಬರೀ ಹೀಗೆ ಹೋಗೋಣವೇ?

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ): ನಾವು ಬಿ.ಜೆ.ಪಿಯವರು ಎಲ್ಲರೂ ಸಭಾತ್ಯಾಗ ಮಾಡಿದರೂ ನಾನು ಸಭಾತ್ಯಾಗ ಮಾಡಿ ವಾಪಸ್ ಬಂದು ಗಮನ ಸೆಳೆಯುವ ಸೂಚನೆ ಇದೆ ಎಂದು ಕುಳಿತಿದ್ದೇನೆ. ಅದು ಬರುತ್ತದೋ ಇಲ್ಲವೋ ಎಂದು ಹೇಳಿದ್ದರೆ ನಾನು ಆಗಲೇ ಹೋಗುತ್ತಿದ್ದೆ. ಈಗಲಾದರೂ ಅದು ಇದೆಯೋ ಇಲ್ಲವೋ ಎಂದು....

ಅಧ್ಯಕ್ಷರು: ಜಾತಿ ಕೆಟ್ಟಿದ್ದೇವೆ ಸುಖವಾದರೂ ಸಿಗಲಿ ಎಂದು ನೀವು ಹೇಳುತ್ತಿರುವುದು. ನೀವು ಅಷ್ಟು ಹೊತ್ತಿನಿಂದ ಕುಳಿತಿದ್ದೀರಿ, ಇವತ್ತೇ ತೆಗೆದುಕೊಳ್ಳುತ್ತೇನೆ. ಅವರೂ ಹೋಗಿದ್ದಾರೆ. ಎಂದು ನಾನು ಭಾವಿಸಿದ್ದೆ, ಅವರು ಇದ್ದದ್ದು ನಾನು ನೋಡಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ: ಸಭಾತ್ಯಾಗ ಮಾಡಿಯೇ ಮತ್ತೆ ಬಂದಿದ್ದೇನೆ....

(7) ಗಮನ ಸೆಳೆಯುವ ಸೂಚನೆ

(1) ರಾಜ್ಯದ ಉತ್ತರ ಕನ್ನಡ ಮತ್ತು ಇತರ ಕೆಲವು ಜಿಲ್ಲೆಗಳ ರೈತರಿಗೆ ಕೇಂದ್ರ ಸರ್ಕಾರದ ಸಹಾಯಧನದಿಂದ ''ಮೈಲು ತುತ್ತಾ''ವನ್ನು ಈ ವರ್ಷ ಸರ್ಕಾರ ನಿಲ್ಲಿಸಿರುವುದರಿಂದ ತೊಂದರೆಯಾಗಿರುವುದು.

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ): ಮಾನ್ಯ ಅಧ್ಯಕ್ಷರೆ, ರಾಜ್ಯ ಉತ್ತರ ಕನ್ನಡ ಮತ್ತು ಇತರ ಕೆಲವು ಜಿಲ್ಲೆಗಳ ರೈತರಿಗೆ ಕೇಂದ್ರ ಸರಕಾರದ ಸಹಾಯಧನದಿಂದ

ವಿತರಿಸಲಾಗುತ್ತಿದ್ದ ಮೈಲು ತುತ್ತಾವನ್ನು ಈ ವರ್ಷ ಸರಕಾರ ನಿಲ್ಲಿಸಿರುವುದರಿಂದ ರೈತರ ಕೃಷಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ತೋಟಗಾರಿಕಾ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಡಿ.ಟಿ.ಜಯಕುಮಾರ್ (ಮಾನ್ಯ ತೋಟಗಾರಿಕಾ ರಾಜ್ಯಸಚಿವರು): ಮಾನ್ಯ ಅಧ್ಯಕ್ಷರೆ, ಹೇಳಿಕೆ ಈ ರೀತಿ ಇದೆ.

ಕೇಂದ್ರ ವಲಯ ಅಡಿಕೆ ಅಭಿವೃದ್ಧಿ ಯೋಜನೆಯನ್ನು ಕೇಂದ್ರಸರ್ಕಾರದ ನೆರವಿನಿಂದ 1996-97ನೇ ಸಾಲಿನವರೆವಿಗೆ ರಾಜ್ಯದಲ್ಲಿ ಇಲಾಖೆಯ ಅನುಷ್ಠಾನಗೊಳಿಸಿ ಹಲವಾರು ಕಾರ್ಯಕ್ರಮಗಳಡಿ ಅಡಿಕೆ ಬೆಳೆಗಾರರಿಗೆ ನೆರವು ನೀಡಲಾಗಿದೆ.

ಕೇಂದ್ರ ಸರ್ಕಾರವು ಹಠಾತ್ತಾಗಿ ದಿನಾಂಕ 2-6-97ರಂದು 1997-98ನೇ ಸಾಲಿನಿಂದ ಈ ಯೋಜನೆಯನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಿ ರಾಜ್ಯದ ಅನುದಾನದ ವತಿಯಿಂದ ಅನುಷ್ಠಾನಗೊಳಿಸಲು ಸೂಚಿಸಿದೆ. ಆದುದರಿಂದ ಋತುಮಾನಕ್ಕೆ ಅನುಗುಣವಾಗಿ ಈ ಯೋಜನೆಯಡಿ ಮೈಲು ಮತ್ತು ಪೂರೈಸಲು ರೂ.30.00 ಲಕ್ಷ ಪ್ರಸ್ತಾವನೆಯನ್ನು ತೋಟಗಾರಿಕೆ ನಿರ್ದೇಶಕರು ಸರ್ಕಾರಕ್ಕೆ ಕಳುಹಿಸಿದ್ದಾರೆ. ಈ ಪ್ರಸ್ತಾವದ ಸಾಧಕ-ಬಾಧಕಗಳ ಬಗ್ಗೆ ಯೋಜನಾ ಇಲಾಖೆ, ಆರ್ಥಿಕ ಇಲಾಖೆಗಳೊಡನೆ ಸಮಾಲೋಚಿಸಲಾಗುತ್ತಿದ್ದು, ತೀವ್ರವಾಗಿ ಪರಿಶೀಲಿಸಲಾಗುತ್ತಿದೆ. ಈ ಎರಡೂ ಇಲಾಖೆಗಳ ಅನುಮೋದನೆ ದೊರೆತ ತರುವಾಯ ಇದನ್ನು ಅನುಷ್ಠಾನಗೊಳಿಸುವ ವಿಚಾರದಲ್ಲಿ ಪರಿಗಣಿಸಲಾಗುವುದು.

ಶ್ರೀ ಕೆ.ವಿಶ್ವೇಶ್ವರ ಹೆಗಡೆ: ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಇಂತಹ ಸನ್ನಿವೇಶದಲ್ಲಿ ಈ ವಿಷಯ ಹೆಚ್ಚು ಗಮನ ಸೆಳೆದು ಉಪ ಪ್ರಶ್ನೆ ಕೇಳುವುದಕ್ಕೆ ವಾತಾವರಣ ಸರಿ ಇಲ್ಲವೆಂದು ಅನ್ನಿಸುತ್ತಿದೆ. ನಮ್ಮ ಜಿಲ್ಲೆಯ ಕ್ಷೇತ್ರದ ರೈತರದ್ದೇ ದೊಡ್ಡ ಸಮಸ್ಯೆ ಇರುವುದರಿಂದ ಇದನ್ನು ಕೇಳುವುದಕ್ಕೆ ಬಯಸುತ್ತೇನೆ. ಕೇಂದ್ರ ಸರಕಾರ ಜೂನ್ 2ನೇ ತಾರೀಖು ಹಠಾತ್ತಾಗಿ ನಿಲ್ಲಿಸಿದೆ ಎಂದು ಹೇಳಿದ್ದಾರೆ. ಇದೊಂದು ದೊಡ್ಡ ಸಹಾಯವಾಗಿ ರೈತರಿಗೆ ಸರಕಾರ ಕೊಡುತ್ತಿತ್ತು. ಈಗ ಏಕಾ ಏಕಿ ಕೇಂದ್ರ ಸರಕಾರ ಇದನ್ನು ನಿಲ್ಲಿಸಿರುವುದರಿಂದ ರಾಜ್ಯ ಸರಕಾರ ತಕ್ಷಣದಿಂದ ರೈತರಿಗೆ ಕೊಡಬೇಕಾದ ಮೈಲುತುತ್ತವನ್ನು ಕೊಡುವುದಕ್ಕೆ ಮುಂದೆ ಬರಬೇಕಾಗಿತ್ತು. ಇನ್ನೂ ಇದು ಪರಿಗಣನೆ ಹಂತದಲ್ಲೇ ಇದೆ. ನಮ್ಮ ಉತ್ತರ ಕನ್ನಡ ದಕ್ಷಿಣ ಮಲೆನಾಡಿನಲ್ಲಿ ಈ ವರ್ಷ ಪ್ರತಿ ವರ್ಷಕ್ಕಿಂತ ಹೆಚ್ಚು ಮಳೆಯಾಗುತ್ತಿದೆ. ಇದರಿಂದಾಗಿ ಈ ರೋಗ ಹರಡುವ ಲಕ್ಷಣಗಳು ಹೆಚ್ಚು ಹೆಚ್ಚು ಕಂಡು ಬರುತ್ತಿದೆ. ಈಗಾಗಲೇ ಆ ರೋಗ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಆ ರೋಗವನ್ನು ತಡೆಯುವ ದೃಷ್ಟಿಯಿಂದ ಮೈಲುತುತ್ತವನ್ನು ನೀವು ಈ ವಾರದೊಳಗೆ ಇಲ್ಲವೇ 4-3 ದಿವಸದಲ್ಲಿ ಎಂದು ಪರಿಮಿತಿಯನ್ನು ಹಾಕಿಕೊಂಡು ಇದರ ಬಗ್ಗೆ ನಿರ್ಣಯ ತೆಗೆದುಕೊಂಡು ರೈತರಿಗೆ ಸಹಾಯಧನದಿಂದ ಮೈಲುತುತ್ತವನ್ನು

ಕೊಡುವ ಪ್ರಯತ್ನ ಮಾಡಿ. ಕೇಂದ್ರದ ಜೊತೆಯಲ್ಲಿ ಪತ್ರ ವ್ಯವಹಾರ ಮಾಡಿ ರೈತರಿಗೆ ಸಬ್ಸಿಡಿಯನ್ನು ಕೊಡುವಂತಹ ಮೈಲು ತುತ್ತವನ್ನು ಅಥವಾ ಬೇರೆ ಬೇರೆ ಯೋಜನೆಯನ್ನು ಮುಂದುವರಿಸುವಂತಹ ಪ್ರಯತ್ನ ಮಾಡಬೇಕು. ಕೇಂದ್ರ ಸರಕಾರ ರೈತರ ಪರವಾಗಿ ಇದೆ ಎಂದು ನಾವು ಕೇಳುತ್ತಿದ್ದೇವೆ. ಅದರ ಕ್ರಮ ನಮಗೆ ಕಾಣಬೇಕಲ್ಲಾ ನಿಮ್ಮ ಪ್ರಯತ್ನವನ್ನು ಇದರ ಬಗ್ಗೆ ಮುಂದುವರಿಸಿ ಎಂದು ಕೇಳುತ್ತಿದ್ದೇನೆ. ಈ ಪರಿಗಣನೆ ಯಾವಾಗ ಮುಗಿಯುತ್ತದೆ. ರೈತರಿಗೆ ಈ ಸೌಲಭ್ಯ ಸಿಗುತ್ತದೋ ಇಲ್ಲವೋ ಎಂಬುದಕ್ಕೆ ಸ್ಪಷ್ಟವಾದ ಉತ್ತರ ಬೇಕು.

ಶ್ರೀ ಡಿ.ಬಿ.ಜಯಕುಮಾರ್: ಮಾನ್ಯ ಸದಸ್ಯರು ಹೇಳಿರತಕ್ಕಂತಹ ಕಳಕಳಿ ಸರಕಾರಕ್ಕೆ ಅರ್ಥವಾಗಿದೆ. ಮಳೆ ಜಾಸ್ತಿ ಬೀಳುವ ಸಂದರ್ಭದಲ್ಲಿ ಅಡಿಕೆಗೆ ಬರತಕ್ಕಂತಹ ಕೊಳೆ ರೋಗವನ್ನು ನಿವಾರಣೆ ಮಾಡಿ ಸಸ್ಯ ಸಂರಕ್ಷಣೆ ಮಾಡಲಿಕ್ಕೋಸ್ಕರ ಮೈಲುತುತ್ತವನ್ನು ನಾವು ಸರಕಾರದಿಂದ ಕೊಡುತ್ತಿದ್ದೆವು. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರದಿಂದ ಅನುದಾನ ಪಡೆಯುತ್ತಿದ್ದೆವು. ಇದಕ್ಕೇನು ಕಾರಣವೋ ಗೊತ್ತಿಲ್ಲ. ಹಠಾತ್ತಾಗಿ ಅದನ್ನು ನಿಲ್ಲಿಸಿದ್ದಾರೆ. ಅದಕ್ಕಾಗಿ ಯೋಜನಾ ಇಲಾಖೆ ಮತ್ತು ಹಣಕಾಸು ಇಲಾಖೆಯ ಅನುಮತಿಯನ್ನು ಕೇಳಿದ್ದೇವೆ. ಅವರು ಅನುಮತಿ ಕೊಟ್ಟರೆ ಖಂಡಿತ ಇದನ್ನು ತೆಗೆದುಕೊಂಡು ಪರಿಶೀಲಿಸಿ ಅವರಿಗೆ ಮೈಲು ತುತ್ತವನ್ನು ಸಪ್ಲೈ ಮಾಡುವುದಕ್ಕೆ ಕ್ರಮವನ್ನು ಸರಕಾರ ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಇದು ಕೇಂದ್ರ ಸರಕಾರದ ಯೋಜನೆ. ಹಠಾತ್ತಾಗಿ ಅದು ನಿಂತಿದೆ.

ಶ್ರೀ ವಿಶ್ವೇಶ್ವರ ಹೆಗಡೆ: ಆದಷ್ಟು ಬೇಗವೆಂದು ಹೇಳುತ್ತಾರೆ ಆದಷ್ಟು ಬೇಗ ಎಂದರೆ ಅದಕ್ಕೆ ಖಚಿತವಾದ....

ಅಧ್ಯಕ್ಷರು: ಬೇಕಾದರೆ ಅವರು ದೆಹಲಿಗೆ ಹೋಗಿ ಬರಲಿ.

ಶ್ರೀ ವಿಶ್ವೇಶ್ವರ ಹೆಗಡೆ: ಅದು ಕೇಂದ್ರ ಸರಕಾರಕ್ಕೆ ಹೋಗುವುದು ಆಯಿತು. ರಾಜ್ಯ ಸರಕಾರದವರೇ ಅನುದಾನ ಕೊಡಬಹುದು. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ....

ಶ್ರೀ ಡಿ.ಟಿ.ಜಯಕುಮಾರ್: ಹಣಕಾಸು ಇಲಾಖೆ ಅನುಮತಿ ಕೊಡಬೇಕು. ಅನುಮತಿಯನ್ನು ಬೇಗ ತೆಗೆದುಕೊಳ್ಳಲಿಕ್ಕೆ ಪರಿಶೀಲಿಸುತ್ತೇನೆ.

ಅಧ್ಯಕ್ಷರು: ನಿಮ್ಮದು ಅಡಕೆ ಇದೆಯಲ್ಲಾ ಅಡಕೆ ಅಂದರೆ ಬರುವುದು ಗೇಣೆ ಎಂದರೆ ಬರುವುದು.

ಶ್ರೀ ಕಾಗೋಡು ತಿಮ್ಮಪ್ಪ: ಈ ಪ್ರಸ್ತಾವನೆ ಸಾಧಕಬಾಧಕಗಳ ಬಗ್ಗೆ ಯೋಜನಾ ಇಲಾಖೆ ಹಣಕಾಸು ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದ್ದು ತೀವ್ರವಾಗಿ

ಪರಿಶೀಲಿಸಲಾಗುತ್ತಿದೆ ಎಂದು ಇಲ್ಲಿ ತಿಳಿಸಿದ್ದಾರೆ. ಒಂದು ಆ್ಯಕ್ಟೀವ್ ಕನ್‌ಸಿಡರ್‌ೇಷನ್ ಎಂದರೆ ಸರಕಾರದ ಮನಸ್ಸಿನಲ್ಲಿ ಇನ್ನೂ ಯಾವುದೇ ತೀರ್ಮಾನಕ್ಕೆ ಬಂದಿಲ್ಲ. ಮೂಗಿಗೆ ತುಪ್ಪ ಹಚ್ಚಿ ಕಳುಹಿಸತಕ್ಕಂತಹ ಕೆಲಸ ನಡೆದಿದೆ.

ಅಧ್ಯಕ್ಷರು: ಇದು ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟದ್ದು ಮಾನ್ಯ ತಿಮ್ಮಪ್ಪನವರೇ, ನೀವು ಸ್ವಲ್ಪ ಹೇಳಿ. ನಿಮ್ಮ ಮಾತು ನಡೆಯುತ್ತದೆ. ಒಂದುಚೂರು ಅವರಿಗೆ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ: ಎಷ್ಟೋ ವರ್ಷದಿಂದ ಬ್ರಿಟಿಷರ ಕಾಲದಿಂದ ಮೈಲುತುತ್ತವನ್ನು ಅಡಿಕೆ ಬೆಳೆಗಾರರಿಗೆ ಸಬ್ಸಿಡಿ ದರದಲ್ಲಿ ಕೊಡುತ್ತಿದ್ದು ಇವತ್ತಿನವರೆಗೆ ನಾವು ಇದರ ಪ್ರಯೋಜನವನ್ನು ಪಡೆಯುತ್ತಿದ್ದೇವೆ ಆದ್ದರಿಂದಲೇ ಈ ರೋಗ ನಿವಾರಣೆಯಾಗಿದೆ. ಇಂತಹ ಸಂದರ್ಭದಲ್ಲಿ ಅತ್ಯಂತ ಶೀಘ್ರಗತಿಯಿಂದ ಕೇಂದ್ರದವರ ಜೊತೆ ಹೋಗಿ ತೀರ್ಮಾನ ಮಾಡಿಕೊಂಡು ಬರುವುದು ಬಿಟ್ಟು ಇನ್ನೂ ಯೋಚನೆ ಮಾಡುತ್ತಿದ್ದೇವೆ, ಪರಿಶೀಲನೆ ಮಾಡುತ್ತಿದ್ದೇವೆ ಆ್ಯಕ್ಟೀವ್ ಕನ್‌ಸಿಡರೇಷನ್, ಎಂದು ಕುಳಿತುಕೊಂಡರೆ ಅಲ್ಲಿ ಕೊಳೆ ಬರುವುದು ನಿಲ್ಲುತ್ತದೆಯೇ?

ಶ್ರೀ ಡಿ.ಟಿ.ಜಯಕುಮಾರ್: ಕೇಂದ್ರ ಸರಕಾರಕ್ಕೆ ಹೋದರೆ ನಿಧಾನವಾಗುತ್ತದೆ ಎಂದು ನಮ್ಮ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ: ಅದು ಯಾವಾಗ ಆಗುತ್ತದೆ ತಿಳಿಸಿ.

ಶ್ರೀ ಕಾಗೋಡು ತಿಮ್ಮಪ್ಪ: ಕೇಂದ್ರ ಜೊತೆ ಸಮಾಲೋಚನೆ ಮಾಡುತ್ತೇವೆಂದು ಎಲ್ಲಿ ಇದರಲ್ಲಿದೆ?

ಶ್ರೀ ಡಿ.ಟಿ.ಜಯಕುಮಾರ್: ಕೇಂದ್ರ ವಲಯ ಅಡಿಕೆ ಕೃಷಿ ಯೋಜನೆಗೆ ನಿಲ್ಲಿಸಿದ್ದಾರೆ. ಅಲ್ಲೂ ಕೂಡ ಪ್ರಸ್ತಾಪ ಮಾಡುತ್ತೇವೆ.

ಶ್ರೀ ಎಂ.ವೀರಪ್ಪ ಮೊಯಿಲಿ: ಕೇಂದ್ರದ್ದು ಪ್ರಶ್ನೆಯೇ ಇಲ್ಲ. ಈ ಸ್ಟೇಟ್‌ಮೆಂಟ್‌ಅನ್ನು ಸರಿಯಾಗಿ ಓದಿ. ಹಿಂದೆ ಈ ಯೋಜನೆ ಸಂಟ್ರಲ್ ಸೆಕ್ಟಾರ್‌ನಲ್ಲಿ ಇತ್ತು. ಸೆಂಟ್ರಲ್ ಸೆಕ್ಟಾರ್‌ನ ಈ ಯೋಜನೆಯನ್ನು ಆಮೇಲೆ ವರ್ಗಾಯಿಸಿದ್ದಾರೆ. ಇದು ಕೇಂದ್ರ ಸರಕಾರದ ಪರಿಶೀಲನೆ ಅಲ್ಲ ನೀವೇ ಇದನ್ನು ಮಾಡಬೇಕು. ಕೇಂದ್ರ ಸರಕಾರ ಹಠಾತ್ತಾಗಿ 2-6-97ರಂದು 97-98ನೇ ಸಾಲಿನಿಂದ ಈ ಯೋಜನೆಯನ್ನು ರಾಜ್ಯ ಸರಕಾರಕ್ಕೆ ವರ್ಗಾಯಿಸಿ ರಾಜ್ಯದ ಅನುದಾನದ ವತಿಯಿಂದ ಅನುಷ್ಠಾನಗೊಳಿಸಲು ಸೂಚಿಸಿದೆ. ಆದ್ದರಿಂದ ಕೇಂದ್ರದ ಹಣಕಾಸು ಇಲಾಖೆ ಯೋಜನಾ ಇಲಾಖೆ ಪರಿಶೀಲನೆ ಅಲ್ಲ. ನಿಮ್ಮ ರಾಜ್ಯದ ಹಣಕಾಸು ಇಲಾಖೆ ಯೋಜನಾ ಇಲಾಖೆ ಪರಿಶೀಲನೆಯಲ್ಲಿ ಇದೆ. ಅದನ್ನು ವರ್ಗಾಯಿಸಿದ ಮೇಲೆ ನೀವು ಕೊಡಬೇಕಾಗುತ್ತದೆ.

ಶ್ರೀ ಡಿ.ಟಿ.ಜಯಕುಮಾರ್: ದಯಮಾಡಿ ಮುಂದಕ್ಕೆ ಓದಿ ಕೇಂದ್ರ ಸರಕಾರಕ್ಕೆ ಅಲ್ಲ ನಮ್ಮ ಸರಕಾರಕ್ಕೆ.....

ಶ್ರೀ ಸಿದ್ದರಾಮಯ್ಯ: ಇದು ಸೆಂಟ್ರಲೀ ಸ್ಪಾನ್ಸರ್ ಸ್ಕೀಮ್. ಈಗ ಇದನ್ನು ರಾಜ್ಯ ಸರಕಾರಕ್ಕೆ ವರ್ಗಾಯಿಸಿದ್ದಾರೆ. It is a centrally sponsored scheme. NOw it is transferred to State Government, ರಾಜ್ಯ ಸರಕಾರಕ್ಕೆ ವರ್ಗಾವಣೆಯಾಗಿದೆ. ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ಅವರು ಹೇಳುತ್ತಿದ್ದಾರೆ. ಇತ್ತೀಚೆಗೆ ಆಗಿರುವುದು ಇದು.

ಶ್ರೀ ಕಾಗೋಡು ತಿಮ್ಮಪ್ಪ: ದೆಹಲಿಗೆ ಹೋಗಿ ಬನ್ನಿ ಎಂದು ಮಾನ್ಯ ಅಧ್ಯಕ್ಷರೇ ಹೇಳಿದ್ದಾರೆ. ಅದಕ್ಕೆ ಅವರೂ ತಲೆ ಅಲ್ಲಾಡಿಸಿದ್ದಾರೆ.

SRI SIDDARAMAIAH:- It is a centrally sponsored scheme. Now it is transferred to the State Government. The State Government is considering actively.

ಶ್ರೀ ಕಾಗೋಡು ತಿಮ್ಮಪ್ಪ: ನಾನು ಮೊದಲು ಕೇಳಿದ್ದು ಅದನ್ನೇ....

ಅಧ್ಯಕ್ಷರು: ಮಾನ್ಯ ವೀರಪ್ಪ ಮೊಯಿಲಿಯವರು ಹೇಳುವವರೆಗೆ ನನ್ನ ಹತ್ತಿರ ಕಾಪಿ ಇರಲಿಲ್ಲ ಈಗ ನೋಡಿದೆ ತಾವು ಹೇಳಿದ್ದು ಅಕ್ಷರಶಃ ನಿಜ.

ಶ್ರೀ ವಾಟಾಳ್ ನಾಗರಾಜ್: ಇದು ಈ ಕಾಲಕ್ಕೆ ಕೊಡುವಂಥಾದ್ದು ಅಲ್ಲ. ಈ ಜನ್ಮಕ್ಕೆ ಇದು ಆಗುತ್ತದೋ ಇಲ್ಲವೋ ಎನ್ನುವ ಪರಿಸ್ಥಿತಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ: ಈಗಲೇ ಹೇಳಬೇಕು. *

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್: ನಾವು ಕೇಂದ್ರ ಸರಕಾರಕ್ಕೆ ಹೇಳಿಲ್ಲ ನಾವು ನಮ್ಮ ಸರಕಾರಕ್ಕೆ ಹೇಳಿರುವುದು.

ಅಧ್ಯಕ್ಷರು: ಕೇಂದ್ರದ್ದೇನೂ ಇಲ್ಲ. ಹೇಳಿಕೆಯ ಪ್ರತಿ ನನ್ನ ಕೈಯ್ಯಲ್ಲಿ ಇದೆ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವರೇನೋ ಮಾರವಾಡಿ ಸರಕಾರವೆಂದು ಹೇಳಿದರು. ಮಾನ್ಯ ಸಿದ್ಧರಾಮಯ್ಯನವರಿಗೆ ಏಕೆ ಮಾರವಾಡಿ ಸರಕಾರವೆಂದು ಹೇಳುತ್ತೀರಿ. ಆ ಪದ ಸರಿ ಇಲ್ಲ. ಮಾರವಾಡಿಯ ರೀತಿ ನೀವು ಮಾಡಬೇಡಿ ಎಂದು ಅವರು ಹೇಳಿದರು.

---

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಅವರು ಗಂಟು ಬಿಚ್ಚುವುದಿಲ್ಲ. ಇವರೂ ಸ್ವಲ್ಪ ಗಂಟು ಬಿಚ್ಚಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ: ಮಾರವಾಡಿಗಳು ಎಂದು ಹೇಳತಕ್ಕಂಥಾದ್ದು ವೆರಿ ಬ್ಯಾಡ್.

ಶ್ರೀ ವಾಟಾಳ್ ನಾಗರಾಜ್: ಮಾರವಾಡಿ ಎನ್ನುವ ಪದ ತೆಗೆಯಬೇಕು.

ಅಧ್ಯಕ್ಷರು: ಇದನ್ನು ರಾಜ್ಯ ಸರಕಾರವೇ ಮಾಡಬೇಕು.

ಅಧ್ಯಕ್ಷರು: ಸ್ಟೇಟ್ ಗೌರ್ನಮೆಂಟೇ ಮಾಡಬೇಕು. ಮಾನ್ಯ ಉಪಮುಖ್ಯಮಂತ್ರಿಗಳು ಹಣಕಾಸು ಸಚಿವರೂ ಆಗಿದ್ದಾರೆ. ಅವರು ಆಶ್ವಾಸನೆಯನ್ನು ಕೊಡುತ್ತಿದ್ದಾರೆ. ಮಾಡಿಕೊಡುತ್ತಾರೆ ಬಿಡಿ. ರೈತರ ಹಿತದೃಷ್ಟಿಯಿಂದ ಮಾಡಿಕೊಡುತ್ತಾರೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 90% of the Centrally sponsored schemes have been transferred to State Government with the money also. We will take a decision.

ಅಧ್ಯಕ್ಷರು: ಇದರ ಬಗ್ಗೆ ಚರ್ಚೆ ಮುಕ್ತಾಯವಾಯಿತು.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೇ, ಮಳೆಯಾದಮೇಲೆ ಏನೂ ಉಪಯೋಗಕ್ಕೆ ಬರುವುದಿಲ್ಲ. ಇಲ್ಲಿಯವರೆಗೆ ಆದನ್ನು ನೀವು ಕೊಡಬೇಕಾಗಿತ್ತು. ನೀವು ಇನ್ನೂ ಕೂಡ ಪರಿಶೀಲನೆಯಲ್ಲಿದೆ ಎಂದು ಹೇಳಿದರೆ ನಾವೇನು ಹೇಳೋಣ?

ಅಧ್ಯಕ್ಷರು: ಈಗ ಆದದ್ದು ಆಗಿ ಹೋಯಿತು. ಮುಂದಕ್ಕೆ ಅವರು ಮುನ್ಸೆಚ್ಚರಿಕೆ ತೆಗೆದುಕೊಂಡು ರಾಜ್ಯಕ್ಕೆ ವರ್ಗಾವಣೆಯಾಗಿರುವುದರಿಂದ ರೈತರಿಗೆ ತೊಂದರೆಯಾಗಿರುವ ಬಗ್ಗೆ ಸರಿ ಮಾಡುತ್ತಾರೆ. ಅವರನ್ನು ದೆಹಲಿಗೆ ಕಳುಹಿಸುವುದಿಲ್ಲ. ಇಲ್ಲಿಯೇ ಇಟ್ಟುಕೊಳ್ಳುತ್ತೇನೆ. ತಿಮ್ಮಪ್ಪನವರನ್ನು ಮಾತ್ರ ಕಳುಹಿಸುತ್ತೇನೆ ಸ್ವಲ್ಪ ಕೆಲಸ ಇದೆ. ಹೋಗಿಬರಲಿ.

ಶ್ರೀ ಕಾಗೋಡು ತಿಮ್ಮಪ್ಪ: ಲಾಸ್ಟ್ ಪ್ಯಾರಾ ಓದಿದೆ. ಆದರೆ ನಾನು ಮೊದಲೇ ಕೇಳಿದೆ. ಏನು ಕರ್ನಾಟಕ ಸರ್ಕಾರವೋ ಏನೊ?

ಅಧ್ಯಕ್ಷರು: ನನ್ನ ಹತ್ತಿರ ಕಾಪಿ ಇರಲಿಲ್ಲ. ಮಾನ್ಯ ಮೊಯಿಲಿಯವರು ಹೇಳಿದಮೇಲೆ ನಾನು ಓದಿದ್ದು. ಅಲ್ಲಿಗೆ ಈ ಚರ್ಚೆ ಮುಕ್ತಾಯವಾಯಿತು.